aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Business Studies (Paper 1, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Business Studies

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

2026–27ನೇ ಸಾಲಿನ ಪ್ರಥಮ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ – 1

ವಿಷಯ : ವ್ಯವಹಾರ ಅಧ್ಯಯನ (27) ಗರಿಷ್ಠ ಅಂಕಗಳು : 80

ಸಮಯ : 3.00 ಗಂಟೆಗಳು ಒಟ್ಟು ಪ್ರಶ್ನೆಗಳ ಸಂಖ್ಯೆ : 45

ಸೂಚನೆಗಳು:

1) ಈ ಪ್ರಶ್ನೆಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನು ಒಳಗೊಂಡಿದೆ.
2) ಭಾಗ–ಎ ನಾಲ್ಕು ವಿಭಾಗಗಳನ್ನು ಒಳಗೊಂಡಿದೆ, I, II, III ಮತ್ತು IV
3) ಉತ್ತರಿಸುವಾಗ ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ಬರೆಯಿರಿ.
4) ಸರಿಯಾದ ಮತ್ತು ಪೂರ್ಣ ಉತ್ತರವನ್ನು ಬರೆಯಿರಿ.
5) ಭಾಗ–ಎ ಪ್ರಶ್ನೆಗಳಿಗೆ, ಮೊದಲು ಬರೆದ ಉತ್ತರವನ್ನು ಮಾತ್ರ ಮೌಲ್ಯಮಾಪನಕ್ಕಾಗಿ ಪರಿಗಣಿಸಲಾಗುವುದು.

ಭಾಗ–ಎ

I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ 5×1=5

1. ಜನರು ಬೇರೆಯವರಿಗೆ ಕೆಲಸ ಮಾಡಿ, ಸಂಭಾವನೆಯನ್ನು ಪ್ರತಿಫಲವಾಗಿ ಪಡೆಯುವ ಕಸುಬನ್ನು ಹೀಗೆ ಕರೆಯಲಾಗುತ್ತದೆ.

ಎ. ವ್ಯವಹಾರ ಬಿ. ಉದ್ಯೋಗ

ಸಿ. ವೃತ್ತಿ ಡಿ. ಸಾರಿಗೆ

2. ರೋಗಗ್ರಸ್ತ ಸಾರ್ವಜನಿಕ ವಲಯದ ಉದ್ದಿಮೆಗಳ ಪುನರ್‌ನಿರ್ಮಾಣಕ್ಕೆಗೊಳ್ಳುವವರು:

ಎ. MOFA ಬಿ. MOU ಸಿ. BIFR ಡಿ. NRF

3. ಈ ಕೆಳಗಿನವುಗಳಲ್ಲಿ ಯಾವ ತತ್ವವು ವಿಮಾದಾರ ವಿಮೆಯಿಂದ ಲಾಭ ಪಡೆಯುವುದನ್ನು ಅನುಮತಿಸುವುದಿಲ್ಲ?

ಎ. ಅಗ್ನಿ ವಿಮೆ ಬಿ. ಕಡಲ ವಿಮೆ

ಸಿ. ಆರೋಗ್ಯ ವಿಮೆ ಡಿ. ಜೀವ ವಿಮೆ

4. ಸಣ್ಣ ಉದ್ದಿಮೆಯೆಂದು ವ್ಯಾಖ್ಯಾನಿಸಲ್ಪಟ್ಟ ಕೈಗಾರಿಕಾ ಘಟಕದ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆಯು ಇದಕ್ಕಿಂತ ಹೆಚ್ಚಾಗುವಂತಿಲ್ಲ.

ಎ. 1 ಕೋಟಿ ಬಿ. 10 ಕೋಟಿ

ಸಿ. 25 ಕೋಟಿ ಡಿ. 50 ಕೋಟಿ

5. ಯಾವ ರೀತಿಯ ಚಿಲ್ಲರೆ ವ್ಯಾಪಾರಿಗಳು ತಮ್ಮ ಗ್ರಾಹಕರಿಗೆ ಮನೆ ಬಾಗಿಲಿಗೆ ಸೇವೆಗಳನ್ನು ಒದಗಿಸುತ್ತಾರೆ?

ಎ. ರಸ್ತೆ ವ್ಯಾಪಾರಿಗಳು ಬಿ. ಪೆಡ್ಲರ್ಸ್ ಮತ್ತು ಹಾಕರ್ಸ್

ಸಿ. ಸಾಮಾನ್ಯ ಅಂಗಡಿಗಳು ಡಿ. ಬೀದಿ ಮಳಿಗೆ ವ್ಯಾಪಾರಿಗಳು

II **ಆವರಣದಲ್ಲಿ ನೀಡಿರುವ ಉತ್ತರಗಳಿಂದ ಸೂಕ್ತವಾದವುಗಳನ್ನು ಆಯ್ಕೆ ಮಾಡಿ ಖಾಲಿ ಜಾಗಗಳನ್ನು ಭರ್ತಿ ಮಾಡಿ .**

(ಕಾರ್ಯಶೀಲ, ಬಂಡವಾಳ, ಮಾರಾಟ ಯಂತ್ರ, ನೊಂದಣಿ, ಪ್ರಮಾಣ ಪತ್ರ, 2, ಹಡಗು, 10)

5×1=5

6. ಪಾಲುಗಾರಿಕೆ ಸಂಸ್ಥೆಯನ್ನು ಸ್ಥಾಪಿಸಲು ಕನಿಷ್ಠ _____ ಸದಸ್ಯರಿರಬೇಕು.
7. ಹಡಗು ವಿಮೆ/ ಹಲ್ ಇನ್ಸೂರೆನ್ಸ್ ನಲ್ಲಿ _____ ವಿಮಾರ್ಹ ವಸ್ತು.
8. _____ ಅನ್ನು ಕಂಪನಿಯ ಜನನ ಪ್ರಮಾಣ ಪತ್ರ ಎಂದು ಕರೆಯಲಾಗುತ್ತದೆ.
9. ವ್ಯವಹಾರ ಸಂಸ್ಥೆಯ ದೈನಂದಿನ ಕಾರ್ಯಗಳಿಗೆ ಅಗತ್ಯವಿರುವ ಹಣಕಾಸನ್ನು _____ ಬಂಡವಾಳ ಎಂದು ಕರೆಯುತ್ತಾರೆ.
10. _____ ಮಾರಾಟ ಪ್ರಕ್ರಿಯೆಯ ವಿಧಾನದಲ್ಲಿ ಹೊಸ ಕ್ರಾಂತಿಯಾಗಿವೆ.

III **ಹೊಂದಿಸಿ ಬರೆಯಿರಿ** **5×1=5**

11.

ಎ) ಸಿಮೆಂಟ್ ಕೈಗಾರಿಕೆ	i. ತಿರುಗು ವ್ಯಾಪಾರಿಗಳು
ಬಿ) ಕ್ರೆಡಿಟ್ ಕಾರ್ಡ್	ii. ಸಂಶ್ಲೇಷಣಾ ಕೈಗಾರಿಕೆ
ಸಿ) ಉಳಿಸಿಕೊಂಡ ಗಳಿಕೆ	iii. ಪ್ಲಾಸ್ಟಿಕ್ ಹಣ
ಡಿ) ಸಂಚಾರಿ ಚಿಲ್ಲರೆ ವ್ಯಾಪಾರಿ	iv. ಆಂತರಿಕ ಹಣಕಾಸಿನ ಮೂಲ
ಇ) ಇಂಡೆಂಟ್	v. ರಫ್ತು ದಾಖಲೆ ಪತ್ರ
	vi. ಆಮದು ದಾಖಲೆ ಪತ್ರ

IV ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದದಲ್ಲಿ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ **5×1=5**

12. ಶೇರುಗಳನ್ನು ಮುಕ್ತವಾಗಿ ವರ್ಗಾಯಿಸಬಹುದಾದ ಕಂಪನಿಯ ಪ್ರಕಾರವನ್ನು ತಿಳಿಸಿ.
13. ಸಾರ್ವಜನಿಕ ವಲಯದ ಉದ್ದಿಮೆಗಳ ಮಾಲೀಕರು ಯಾರು?
14. ವ್ಯವಹಾರದ ನೈತಿಕತೆಗೆ ಒಂದು ಉದಾಹರಣೆ ಕೊಡಿ.
15. ನಮ್ಮ ಸಾಂಪ್ರದಾಯಿಕ ಜ್ಞಾನದ ಸುರಕ್ಷಿತ ಮತ್ತು ತಪ್ಪಾದ ಹಕ್ಕು ಸ್ವಾಮ್ಯಕ್ಕಾಗಿ ಭಾರತ ಸರ್ಕಾರವು ಯಾವ ಭಂಡಾರವನ್ನು ವಿನ್ಯಾಸಗೊಳಿಸಿದೆ?
16. ರಫ್ತು ಎಂದರೇನು?

ಭಾಗ–ಬಿ

V ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ತಲಾ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೆ ಎರಡು ಅಂಕಗಳು. **6×2=12**

17. ಕೈಗಾರಿಕೆಯನ್ನು ವ್ಯಾಖ್ಯಾನಿಸಿ?
18. ಪಾಲುದಾರಿಕೆ ಒಪ್ಪಂದವು ಒಳಗೊಂಡಿರುವ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.
19. ಜಂಟಿ ಉದ್ದಿಮೆಗಳ ಯಾವುದಾದರೂ ಎರಡು ಪ್ರಕಾರಗಳನ್ನು ತಿಳಿಸಿ.
20. ಇ–ವ್ಯವಹಾರ ಮತ್ತು ಇ–ಕಾಮರ್ಸ್ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಹೇಳಿ.
21. ಪರಿಸರ ಮಾಲಿನ್ಯದ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
22. ಪ್ರವರ್ತಕರ ಯಾವುದಾದರೂ ಎರಡು ಕಾರ್ಯಗಳನ್ನು ತಿಳಿಸಿ.
23. ವ್ಯವಹಾರದಲ್ಲಿ ಸ್ಥಿರ ಬಂಡವಾಳದ ಅವಶ್ಯಕತೆ ಎಂದರೇನು?

24. ಸಾರ್ವಜನಿಕ ಠೇವಣಿಗಳೆಂದರೇನು?

25. ಒಂದು ಸೂಕ್ಷ್ಮ ಉದ್ಯಮವು 95 ಲಕ್ಷಗಳ ಹೂಡಿಕೆಯನ್ನು ಹೊಂದಿದೆ ಮತ್ತು ಉತ್ಪಾದನಾ ವ್ಯವಹಾರದಲ್ಲಿ ತೊಡಗಿದೆ. ಈಗ ಅದು ತನ್ನ ಹೂಡಿಕೆಯನ್ನು 20 ಲಕ್ಷದಷ್ಟು ಹೆಚ್ಚಿಸಲು ಬಯಸಿದೆ.
ಎ) ಅದು ಯಾವ ರೀತಿಯ ಸಣ್ಣ ಉದ್ಯಮವಾಗಲಿದೆ?
ಬಿ) ಅದರ ಗರಿಷ್ಠ ಹೂಡಿಕೆಯ ಮಿತಿ ಎಷ್ಟು?

26. ಸ್ಥಿರ ಅಂಗಡಿ ಚಿಲ್ಲರೆ ವ್ಯಾಪಾರಿಗಳು ಯಾರು?

ಭಾಗ–ಸಿ

VI ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ತಲಾ 10–12 ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 4 ಅಂಕಗಳು. 6×4=24

27. ಯಾವುದಾದರೂ 4 ವಿಧದ ಪಾಲುದಾರರ ಬಗ್ಗೆ ವಿವರಿಸಿ.

28. ಇಲಾಖಾ ಉದ್ದಿಮೆಗಳ ಯಾವುದಾದರೂ ಎರಡು ಅನುಕೂಲತೆಗಳು ಮತ್ತು ಎರಡು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

29. ಶ್ರೀ ರಾಜೀವ್ ಅವರು ಸಾಮಾನ್ಯವಾಗಿ ಕೆಲಸಕ್ಕಾಗಿ ಪ್ರಯಾಣಿಸುತ್ತಾರೆ, ಅವರು ತಮ್ಮ ದೂರವಾಣಿ ಅಥವಾ ಲ್ಯಾಪ್‌ಟಾಪ್‌ನಲ್ಲಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆಯಲು ಬಯಸುತ್ತಾರೆ. ಅವರು ಯಾವ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಬಹುದು ಎಂಬುದನ್ನು ಸೂಚಿಸಿ.

30. ಇ–ವ್ಯವಹಾರದ ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.

31. ಗ್ರಾಹಕರು ಮತ್ತು ಷೇರುಧಾರರಿಗೆ ಸಂಬಂಧಿಸದಂತೆ ವ್ಯವಹಾರದ ಸಾಮಾಜಿಕ ಹೊಣೆಗಾರಿಕೆಯನ್ನು ವಿವರಿಸಿ.

32. ಕಂಪನಿಯ ಮನವಿ ಪತ್ರದ ಯಾವುದಾದರೂ ನಾಲ್ಕು ಕಲಮುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

33. ವ್ಯವಹಾರ ಸಂಸ್ಥೆಯ ಹಣಕಾಸಿನ ಅಗತ್ಯತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

34. ಹಣಕಾಸಿನ ಮೂಲವಾಗಿ ಸಾರ್ವಜನಿಕ ಠೇವಣಿಗಳ ನಾಲ್ಕು ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

35. ಸಣ್ಣ ಕೈಗಾರಿಕೆಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ. ಭಾರತದಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರವನ್ನು ಎತ್ತಿಹಿಡಿಯುವ ಯಾವುದಾದರೂ ನಾಲ್ಕು ಅಂಶಗಳೊಂದಿಗೆ ಈ ಹೇಳಿಕೆಯನ್ನು ಸಮರ್ಥಿಸಿ.

36. ಅಂತರಾಷ್ಟ್ರೀಯ ವ್ಯವಹಾರದಲ್ಲಿ ಪ್ರವೇಶಿಸುವ ವಿಧಾನವಾಗಿ ರಫ್ತು ವ್ಯಾಪಾರದ ಯಾವುದಾದರೂ ಎರಡು ಅನುಕೂಲಗಳು ಮತ್ತು ಎರಡು ಮಿತಿಗಳನ್ನು ನೀಡಿ.

ಭಾಗ–ಡಿ

VII ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ 20–25 ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 8 ಅಂಕಗಳು 3×8=24

37. ವ್ಯವಹಾರ ಎಂದರೇನು? ಅದರ ಲಕ್ಷಣಗಳನ್ನು ವಿವರಿಸಿ.

38. ಸಹಕಾರ ಸಂಸ್ಥೆಗಳನ್ನು ಏಕೆ ಸ್ಥಾಪಿಸಲಾಗುತ್ತದೆ? ವಿವಿಧ ಪ್ರಕಾರದ ಸಹಕಾರ ಸಂಘಗಳನ್ನು ವಿವರಿಸಿ.

39. ವಾಣಿಜ್ಯ ಬ್ಯಾಂಕುಗಳ ಕಾರ್ಯಗಳನ್ನು ವಿವರಿಸಿ.

40. ಅಂಚೆ ಆದೇಶ ಗೃಹಗಳ ಯಾವುದಾದರೂ ನಾಲ್ಕು ಅನುಕೂಲಗಳು ಮತ್ತು ನಾಲ್ಕು ಅನಾನುಕೂಲಗಳನ್ನು ವಿವರಿಸಿ.

41. ಆಮದು ಕ್ರಮಾನುಗತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.